
REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 25 । ಸೆಪ್ಟೆಂಬರ್ 28, 2022 । ಬುಧವಾರ । ಪುಟಗಳು : 8 । ಬೆಲೆ : 2/–

## ಮಹಾಮಂಡಳದ 57ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ




**ಬೆಂಗಳೂರು** : ದಿನಾಂಕ : 20.09.2022ರಂದು ಕೆ.ಎಚ್.ಪಾಟೀಲ ಸಭಾಂಗಣದಲ್ಲಿ ಜರುಗಿದ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 57ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರು ಉದ್ಘಾಟಿಸಿ, ಮಾತನಾಡಿ ಬಹಳ ದಿನಗಳ ನಂತರ ಭೇಟಿಯಾಗುತ್ತಿದ್ದೇವೆ ಇದೊಂದು ಖುಷಿಯ ಸಂಗತಿ. ನಿಮಗೆ ಮತ್ತು ನಮಗೆಲ್ಲರಿಗೆ ಗೊತ್ತಿದ್ದ ಹಾಗೆ ಸಹಕಾರ ಕ್ಷೇತ್ರ ದೊಡ್ಡದಾಗುತ್ತಿದೆ. ಆದರೆ ಶಕ್ತಿ ಹೆಚ್ಚಾಗುತ್ತಿಲ್ಲ. ಕೇಂದ್ರ ಸರ್ಕಾರ, ಭಾರತೀಯ ರಿಜರ್ವ್ ಬ್ಯಾಂಕ್, ರಾಜ್ಯ ಸರ್ಕಾರಗಳ ಹಸ್ತಕ್ಷೇಪ ಆಗುತ್ತಿದೆ. ಪ್ರತಿಯೊಂದು ಹಂತದಲ್ಲಿಯೂ ತೊಂದರೆಗಳನ್ನು ಅನುಭವಿಸುತ್ತಿವೆ. ನೆಟ್ ಎನ್‌ಪಿಎ ಕಡಿಮೆಯಾಗುತ್ತಿದೆ. ಗ್ರಾಸ್ ಎನ್‌ಪಿಎ ಸಾಕಷ್ಟು ಹೆಚ್ಚಾಗುತ್ತ ಹೋಗುತ್ತಿದೆ. ವರ್ಷ ವರ್ಷ ಎನ್‌ಪಿಎ ಹೆಚ್ಚಾಗುತ್ತಿದೆ. ನಮ್ಮನ್ನು ರಕ್ಷಣೆ ಮಾಡುವವರು ಯಾರು ಇಲ್ಲ. ಎಲ್ಲರೂ ಟೀಕೆ ಮಾಡುವವರೇ. ದೇಶದ ಸಾರ್ವಜನಿಕ ವಲಯದ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡಿದ್ದಾರೆ. 9ಲಕ್ಷ 91ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಬಿಗ್ ಟೇಕಪ್ ಮಾಡಿದ್ದಾರೆ. ರೈಟ್‌ಅಪ್ ಮಾಡಿದ್ದಾರೆ. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಎನ್‌ಪಿಎ ಜಾಸ್ತಿ ಆದರೆ ಲಿಕ್ವಿಡಿಟಿ, ಮರ್ಜರ ಮಾಡಬೇಕು ಎಂದು ಹೇಳುತ್ತಾರೆ. ಆದ್ದರಿಂದ ನಮ್ಮ ಬ್ಯಾಂಕುಗಳನ್ನು ಉಳಿಸಿಕೊಳ್ಳಬೇಕಾದರೆ ನಾವು ವಿಲೀನಗೊಳ್ಳಬಾರದು, ಲಿಕ್ವಿಡೇಟ್ ಆಗಬಾರದು. ದಿನಾಂಕ:31.03.2022ರ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ 256 ಪಟ್ಟಣ ಸಹಕಾರ ಬ್ಯಾಂಕುಗಳು 1065 ಶಾಖೆಗಳನ್ನು ಹೊಂದಿ, ರೂ.195.48 ಕೋಟಿ ಲಾಭಗಳಿಸಿವೆ.

ಅಂಬ್ರೆಲಾ ಅರ್ಗನೈಜೇಷನ್ ಸುಮಾರು 15 ವರ್ಷಗಳ ಪ್ರಯತ್ನದ ಫಲವಾಗಿ ಅಂಬ್ರೆಲಾ ಅರ್ಗನೈಜೇಷನ್‌ಗೆ ಭಾರತೀಯ ರಿಜರ್ವ್ ಬ್ಯಾಂಕಿನವರು ಬೆಂಬಲವನ್ನು ಕೊಡುತ್ತಿದ್ದಾರೆ. ಇಂದು "ನ್ಯಾಷನಲ್ ಕೋ–ಆಪರೇಟಿವ್ ಫೈನಾನ್ಸ್ ಅಂಡ್ ಡೆವಲಪಮೆಂಟ್ ಕಾರ್ಪೋರೇಷನ್ ಲಿ.," ಎಂಬ ಕೇಂದ್ರ್ರದ ಅಪೆಕ್ಸ್ ಕಂಪನಿಯಾಗಿ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಪರವಾನಿಗೆ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿದೆ. ಭಾರತೀಯ ರಿಜರ್ವ್ ಬ್ಯಾಂಕಿನವರು ಎನ್‌ಸಿಎಫ್‌ಡಿಸಿ ಯಲ್ಲಿ ಹೂಡಿಕೆ ಮಾಡಬಹುದು ಎಂದು ಹೇಳುತ್ತಿದ್ದಾರೆ. ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕುಗಳಿಗೆ ಅಪೆಕ್ಸ್ ಬ್ಯಾಂಕ್ ಹೇಗೆ ಕಾರ್ಯನಿರ್ವಹಿಸುತ್ತಿದೆಯೋ, ಹಾಗೆಯೇ ದೇಶದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಎನ್‌ಸಿಎಫ್‌ಡಿಸಿ (ಅಂಬ್ರೆಲಾ ಅರ್ಗನೈಜೇಷನ್) ಸಂಸ್ಥೆಯು ಕಾರ್ಯನಿರ್ವಹಿಸುತ್ತದೆ. ಆದ್ದರಿಂದ



3ನೇ ಪುಟಕ್ಕೆ...

2 ಸಾರ್ವಕಾಲಿಕ ಕುಸಿತ ಕಂಡ ರೂಪಾಯಿ ಮೌಲ್ಯ : ಪ್ರತಿ ಡಾಲರ್‌ಗೆ ರೂ.81.18

4 ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 46ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ

7 ನಿಮ್ಮ ಪ್ರಶ್ನೆ – ನಮ್ಮ ಉತ್ತರ



## ಆತ್ಮೀಯ ಸಹಕಾರಿಗಳೇ...

# ನಮ್ಮ ರೈತರ ಹಕ್ಕುಗಳನ್ನು ಎತ್ತಿಹಿಡಿಯುವ, ರಕ್ಷಿಸುವ ಅಗತ್ಯವಿದೆ

ನಮ್ಮ ರೈತರ ಸಂಕಷ್ಟಗಳು ಒಂದೆರಡಲ್ಲ, ರೈತರ ಹಕ್ಕುಗಳನ್ನು ಧಮನಗೊಳಿಸುವ ಸರ್ಕಾರಗಳು ಇದ್ದರಂತೂ ಇವುಗಳ ಆಟಾಟೋಪಕ್ಕೆ ಮೇರೆಯೇ ಇಲ್ಲವಾಗುತ್ತದೆ. 2019 ಏಪ್ರಿಲ್‌ನಲ್ಲಿ ಪೆಪ್ಸಿಕೊ ಇಂಡಿಯಾ ಬಹುರಾಷ್ಟ್ರೀಯ ಕಂಪನಿ, ಗುಜರಾತಿನ ಒಂಬತ್ತು ರೈತರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ, ಈ ರೈತರು ಕಂಪನಿಯಿಂದ ಅನುಮೋದನೆ ಪಡೆಯದೆ ತಾವು ಅಭಿವೃದ್ಧಿ ಪಡಿಸಿರುವ ಎಫ್‌ಎಲ್-2027 ಆಲೂಗಡ್ಡೆ ತಳಿಯನ್ನು ಅಕ್ರಮವಾಗಿ ಬೆಳೆಯುತ್ತಿದ್ದಾರೆ ಎಂದು, ಸಸ್ಯ ತಳಿಗಳು ಮತ್ತು ರೈತರ ಹಕ್ಕುಗಳ ರಕ್ಷಣಾ ಪ್ರಾಧಿಕಾರಕ್ಕೆ ದೂರು ಸಲ್ಲಿಸಿತು. ಇದರಿಂದ 2001ರ ಸಸ್ಯ ತಳಿಗಳ ರಕ್ಷಣಾ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಅದು ಪ್ರಾಧಿಕಾರದ ಮುಂದೆ ವಾದಿಸಿತು.

ರೈತಪರ ಸಂಘಟನೆಗಳು, ನಮ್ಮ ಕೃಷಿಕರು ಹಿಂದಿನಿಂದಲೂ ಈ ತಳಿಯ ಆಲೂಗಡ್ಡೆ ಬೆಳೆಯುತ್ತಿರುವುದನ್ನು ಪ್ರಾಧಿಕಾರದ ಗಮನಕ್ಕೆ ತಂದು, ಪೆಪ್ಸಿಕೊ ಇಂಡಿಯಾ, ಅದಾಗಲೇ ರೈತರು ಬೆಳೆಯುತ್ತಿದ್ದ ಎಫ್‌ಎಲ್-2027 ಎಂಬ ವಿಶಿಷ್ಟ ಆಲೂಗಡ್ಡೆ ತಳಿಗೇ ಪೇಟೆಂಟ್ ಪಡೆದುಕೊಂಡಿದೆ ಎನ್ನುವುದನ್ನು ಸಾದರಪಡಿಸಿತು. ಅದರಂತೆ ಪ್ರಾಧಿಕಾರ ರೈತರ ಮನವಿಯನ್ನು ಪುರಸ್ಕರಿಸಿ, 2021 ಡಿಸೆಂಬರ್‌ನಲ್ಲಿ ಆದೇಶ ನೀಡಿತು. ರೈತರಿಗೆ ದೊರೆತ ಈ ಜಯದ ಬಗ್ಗೆ ಇದೆ ಅಂಕಣದಲ್ಲಿ ಎರಡು ವರ್ಷದ ಹಿಂದೆ ಬರೆದಿದ್ದೆ.

ಬಹುರಾಷ್ಟ್ರೀಯ ಕಂಪನಿಗಳು ಎಷ್ಟೇ ಮುಖಭಂಗವಾದರೂ ತಮ್ಮ ಮೊಂಡುತನವನ್ನು ಬಿಡುವುದಿಲ್ಲ. ಈ ಆದೇಶದ ವಿರುದ್ಧ ಪೆಪ್ಸಿಕೊ ಇಂಡಿಯಾ ದಿಲ್ಲಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದೆ. ಪ್ರಸ್ತುತ ಹೈಕೋರ್ಟ್‌ನಲ್ಲಿ ಇದರ ವಿಚಾರಣೆ ನಡೆಯುತ್ತಿದೆ. ಈ ಆಲೂಗಡ್ಡೆಯಿಂದ ತಯಾರಿಸುವ ಚಿಪ್ಸ್ ತನ್ನದೇ ಆದ ಪರಿಮಳ, ರುಚಿಯನ್ನು ಹೊಂದಿರುತ್ತದೆ. ಪೆಪ್ಸಿಕೊ ತನ್ನ ಪಾನಿಯದೊಂದಿಗೆ ಈ ಚಿಪ್ಸ್ ಅನ್ನೂ ಮಾರಾಟ ಮಾಡುತ್ತಿರುವ ಕಾರಣಕ್ಕೆ ಈ ವಿಶಿಷ್ಟ ತಳಿಯ ಆಲೂಗಡ್ಡೆಯನ್ನು ತನ್ನ ಅನುಮತಿ ಇಲ್ಲದೆ ಬೇರೆ ರೈತರು ಬೆಳೆಯುವಂತಿಲ್ಲ ಎಂದು ವಾದಿಸುತ್ತಿದೆ.

ಈ ಮೊಕದ್ದಮೆ, ಸಸ್ಯ ತಳಿ ಅಭಿವೃದ್ಧಿಪಡಿಸುವ ಬಹುರಾಷ್ಟ್ರೀಯ ಸಂಸ್ಥೆಗಳ ಮತ್ತು ರೈತರ ನಡುವಿನ ಸಂಘರ್ಷವನ್ನು ಮುನ್ನೆಲೆಗೆ ತಂದಿದೆ. ಕಂಪನಿಗಳು ಸಸ್ಯ ತಳಿ ಅಭಿವೃದ್ಧಿಪಡಿಸಿ ಮತ್ತು ಅದರ ಬೀಜದ ಮೇಲೆ ಹಕ್ಕುಗಳನ್ನು ಸ್ಥಾಪಿಸಿಕೊಂಡಿವೆ. ತಾವು ಅನುಮತಿಸಿದ ರೈತರಷ್ಟೇ ಆ ಬೆಳೆಯನ್ನು ಬೆಳೆದು, ಅದನ್ನು ಪೂರ್ವ ನಿಗದಿ ಪಡಿಸಿದ ಬೆಲೆಗೆ ತಮಗೇ ಮಾರಬೇಕು ಎಂದು ಕರಾರು ವಿಧಿಸುತ್ತಾರೆ. ಲಾಭವೇ ಬಹು ಮುಖ್ಯವಾಗಿರುವ ಕಂಪನಿಗಳು ಈ ರೀತಿ ರೈತರ ಶೋಷಣೆ ಮಾಡುತ್ತಿವೆ.

ಅದೇ ವೇಳೆ, ರೈತರು ಯಾವುದೇ ಬೆಳೆಯನ್ನಾದರೂ ಬೆಳೆಯುವ ನ್ಯಾಯಯುತ ಹಕ್ಕನ್ನು ಕೇಳುತ್ತಿದ್ದಾರೆ. ಈ ಪ್ರಕರಣದಲ್ಲಿ ರಾಜ್ಯ/ಕೇಂದ್ರ ಸರ್ಕಾರಗಳು ಕೂಡಲೆ ಮಧ್ಯ ಪ್ರವೇಶಿಸಿ ತಮ್ಮ ರೈತ ಪರ ನಿಲುವುಗಳನ್ನು ತೋರಬೇಕಿದೆ. ರೈತರು ಎಫ್‌ಎಲ್-2027 ಆಲೂಗಡ್ಡೆ ತಳಿಗಳೂ ಸೇರಿದಂತೆ ಯಾವುದೇ ಬೀಜಗಳನ್ನು ಸಂರಕ್ಷಿಸುವ, ಬಿತ್ತುವ, ಮರುಬಿತ್ತುವ, ಬಳಸುವ, ವಿನಿಮಯ ಮಾಡುವ ಹಾಗೂ ಅದರಿಂದ ಬರುವ ಉತ್ಪನ್ನವನ್ನು ಮಾರಾಟ ಮಾಡುವ ರೈತರ ಹಕ್ಕುಗಳನ್ನು ಎತ್ತಿಹಿಡಿಯಬೇಕು ಎಂದು ಆಶಿಸುತ್ತೇನೆ.

▸▸ ಎಚ್.ಕೆ. ಪಾಟೀಲ
ಅಧ್ಯಕ್ಷರು

## ಸಾರ್ವಕಾಲಿಕ ಕುಸಿತ ಕಂಡ ರೂಪಾಯಿ ಮೌಲ್ಯ : ಪ್ರತಿ ಡಾಲರ್‌ಗೆ ರೂ.81.18

**ಮುಂಬೈ** : ಇತ್ತೀಚೆಗೆ ದಾಖಲೆಯ ಕುಸಿತ ಕಂಡಿದ್ದ ರೂಪಾಯಿ ಮೌಲ್ಯ ಮತ್ತೆ ಸಾರ್ವಕಾಲಿಕ ಇಳಿಕೆ ಕಂಡಿದ್ದು, ಪ್ರತೀ ಡಾಲರ್‌ಗೆ ರೂಪಾಯಿ ಮೌಲ್ಯ ರೂ. 81.18ಗೆ ಕುಸಿತವಾಗಿದೆ.

ಶುಕ್ರವಾರದ ಆರಂಭಿಕ ವಹಿವಾಟಿನಲ್ಲೇ ಭಾರತದ ರೂಪಾಯಿ ಮೌಲ್ಯವು 44 ಪೈಸೆ ಕುಸಿದಿದ್ದು, ಅಮೆರಿಕ ಡಾಲರ್ ಎದುರು ರೂ.81.18 ಕ್ಕೆ ಇಳಿಯುವ ಮೂಲಕ ಸಾರ್ವಕಾಲಿಕ ಕುಸಿತ ದಾಖಲಿಸಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಕರೆನ್ಸಿಯ ಬಲ, ದೇಶೀಯ ಷೇರುಗಳಲ್ಲಿನ ನಕಾರಾತ್ಮಕ ಪ್ರವೃತ್ತಿ ಮತ್ತು ಉಕ್ರೇನ್‌ನಲ್ಲಿನ ಭೌಗೋಳಿಕ ರಾಜಕೀಯ ಅಪಾಯದ ಹೆಚ್ಚಳವು ದೇಶೀಯ ಕರೆನ್ಸಿಯ ಮೌಲ್ಯ ಕುಸಿತಕ್ಕೆ ಕಾರಣವಿರಬಹುದು ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ಯುಎಸ್ ಫೆಡರಲ್ ರಿಸರ್ವ್ ನಿರೀಕ್ಷೆಗಳಿಗೆ ಅನುಗುಣವಾಗಿ ರೆಪೊ ದರವನ್ನು 75 ಬೇಸಿಸ್ ಪಾಯಿಂಟ್‌ಗಳಷ್ಟು ಹೆಚ್ಚಿಸಿದೆ. ಅಂತರ್ ಬ್ಯಾಂಕ್ ವಿದೇಶಿ ವಿನಿಮಯದಲ್ಲಿ, ರೂಪಾಯಿ ಮೌಲ್ಯವು 81.08ರಂತೆ ವಹಿವಾಟು ಪ್ರಾರಂಭಿಸಿ, 44 ಪೈಸೆ ಕುಸಿತ ಕಂಡು ರೂ.81.23ಕ್ಕೆ ಇಳಿದು ವಹಿವಾಟು ನಡೆಸುತ್ತಿದೆ. 7 ತಿಂಗಳುಗಳಲ್ಲಿ ಒಂದೇ ದಿನ ರೂಪಾಯಿ ಮೌಲ್ಯವು 83 ಪೈಸೆಗಳಷ್ಟು ಕುಸಿತ ಕಂಡಿತ್ತು.

## ಠೇವಣಿ ಸಂಗ್ರಹ : ಸ್ಪರ್ಧಾತ್ಮಕ ಆಗಬೇಕಿವೆ ಬ್ಯಾಂಕುಗಳು

**ಮುಂಬೈ** : ದೇಶದ ಬ್ಯಾಂಕ್‌ಗಳು ತಮ್ಮಲ್ಲಿ ಠೇವಣಿ ಪ್ರಮಾಣ ಹೆಚ್ಚಿಸಲು ಇನ್ನಷ್ಟು ಸ್ಪರ್ಧಾತ್ಮಕ ಆಗಬೇಕಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಹಬ್ಬಗಳ ಋತು ಆರಂಭವಾಗಿದ್ದು, ಸಾಲಕ್ಕೆ ಬೇಡಿಕೆ ಜಾಸ್ತಿಯಾಗುತ್ತಿದೆ. ಆದರೆ, ಇದೇ ಹೊತ್ತಿನಲ್ಲಿ ನಗದು ಲಭ್ಯತೆ ಕಡಿಮೆ ಆಗಿದೆ.

ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ನಗದು ಲಭ್ಯತೆಯು ಈ ವಾರದ ಆರಂಭದಲ್ಲಿ 40 ತಿಂಗಳ ಕನಿಷ್ಠ ಮಟ್ಟ ತಲುಪಿದೆ. ಇದಾದ ನಂತರ ಆರ್‌ಬಿಐ, ಬ್ಯಾಂಕಿಂಗ್ ವ್ಯವಸ್ಥೆಗೆ ಹಣ ಬಿಡುಗಡೆ ಮಾಡುವಂತಾಗಿದೆ.

ಆಗಸ್ಟ್ 26ಕ್ಕೆ ಕೊನೆಗೊಂಡ ಎರಡು ವಾರಗಳ ಅವಧಿಯಲ್ಲಿ ಬ್ಯಾಂಕ್‌ಗಳು ಸಾಲ ನೀಡುವ ಪ್ರಮಾಣ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 15.5ರಷ್ಟು ಹೆಚ್ಚಾಗಿದೆ. ಆದರೆ ಅದೇ ಹೊತ್ತಿನಲ್ಲಿ ಠೇವಣಿ ಸ್ವೀಕರಿಸುವ ಪ್ರಮಾಣವು ಶೇ 9.5ರಷ್ಟು ಮಾತ್ರ ಜಾಸ್ತಿ ಆಗಿದೆ.

...1ನೇ ಪುಟದಿಂದ



ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಅಂಬ್ರೆಲಾ ಆರ್ಗನೈಜೇಷನ್ ಸಂಸ್ಥೆಯ ಸದಸ್ಯತ್ವ ಪಡೆದುಕೊಂಡಲ್ಲಿ ಬ್ಯಾಂಕುಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ. ನಮಗೆ ಅಂಬ್ರೆಲಾ ಆರ್ಗನೈಜೇಷನ್ ರಕ್ಷಣಾತ್ಮಕವಾದ ಸಂಸ್ಥೆಯಾಗಿದೆ. ಈಗಾಗಲೇ ನಮ್ಮ ದೇಶದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಅಂಬ್ರೆಲಾ ಆರ್ಗನೈಜೇಷನ್ ಸಂಸ್ಥೆಗೆ ಒಟ್ಟು ಸುಮಾರು ರೂ.40ಕೋಟಿ ಷೇರು ಹಣ ಕ್ರೋಢೀಕರಣವಾಗಿದೆ. ಗುಜರಾತ್ ರೂ.23.63 ಕೋಟಿ, ಆಂಧ್ರಪ್ರದೇಶ ರೂ.3.23 ಕೋಟಿ, ಕರ್ನಾಟಕ ರೂ.2.44 ಕೋಟಿ, ಮಹಾರಾಷ್ಟ್ರ ರೂ.1.26 ಕೋಟಿ, ತೆಲಂಗಾಣ ರೂ.0.57 ಕೋಟಿ, ಮಧ್ಯಪ್ರದೇಶ ರೂ.0.31 ಕೋಟಿ, ರಾಜಸ್ತಾನ ರೂ.0.25 ಕೋಟಿ, ದೆಹಲಿ ರೂ.0.10 ಕೋಟಿ.

ಈಗಾಗಲೇ ನಮ್ಮ ರಾಜ್ಯದ 8 ಪಟ್ಟಣ ಸಹಕಾರ ಬ್ಯಾಂಕುಗಳು ಷೇರು ಹಣ ಸಂದಾಯ ಮಾಡಿವೆ. ಆದ್ದರಿಂದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು 0.10%ರಷ್ಟು ಹಣವನ್ನು ಕೊಡಬಹುದು. ತಾವು ಈ ಷೇರು ಹಣವನ್ನು ಕೊಡುವುದರಿಂದ ಕರ್ನಾಟಕದವರು ಮುಂಚೂಣಿಯಲ್ಲಿದ್ದಾರೆ ಎನ್ನಬಹುದು. ಆದ್ದರಿಂದ ಸದ್ಯದ ಸಂದರ್ಭದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಬೆಂಬಲ ದೊರೆಯಬೇಕಾದರೆ ಅಂಬ್ರೆಲಾ ಆರ್ಗನೈಜೇಷನ್ ಕಾರ್ಯನಿರ್ವಹಿಸಬೇಕು. ಆದ್ದರಿಂದ ರಿಜರ್ವ್ ಬ್ಯಾಂಕಿನವರು ಎಷ್ಟು ಪ್ರಮಾಣದ ಷೇರು ನೀಡಲು ಒಪ್ಪಿಗೆ ಸೂಚಿಸಿದ್ದಾರೆಯೋ ಅಷ್ಟು ಪ್ರಮಾಣದ ಷೇರು ಹೂಡಿಕೆ ಮಾಡಿ.

ಪಟ್ಟಣ ಸಹಕಾರ ಬ್ಯಾಂಕುಗಳ ಬಹಳಷ್ಟು ಸಮಸ್ಯೆಗಳಿವೆ. ಮುಂಬರುವ ದಿನಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇವೆ. ಈಗಾಗಲೇ ನಮ್ಮ ದಾವಾ ಪಂಚಾಯಿತಿ ನ್ಯಾಯಾಲಯಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ದಾವೆಗಳನ್ನು ಶೀಘ್ರವಾಗಿ ವಿಲೇವಾರಿಗೊಳಿಸಿ, ಬ್ಯಾಂಕುಗಳ ಹಿತಕ್ಕೆ ಸ್ಪಂದಿಸಿ ಎಂದು ಈಗಾಗಲೇ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇವೆ ಎಂದರು.

57ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಗಲಿದ ಗಣ್ಯರು, ಪಟ್ಟಣ ಬ್ಯಾಂಕುಗಳ ಅಧ್ಯಕ್ಷರು / ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಹಾಸಭೆಯಲ್ಲಿ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ, ಮಹಾಮಂಡಳದ ನಿರ್ದೇಶಕರುಗಳಾದ ಡಿ.ಟಿ. ಪಾಟೀಲ, ರುದ್ರೇಗೌಡ, ಅಶೋಕ ಎಂ. ಮನಗೂಳಿ, ಹೆಚ್.ಸಿ. ಕೃಷ್ಣ, ಎಂ.ಕೆ. ಪಟ್ಟಣಶೆಟ್ಟಿ, ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ಹರೀಶ್ ಆಚಾರ್, ಕೃಷ್ಣಮೂರ್ತಿ ಭಂಡಾರಿ, ರಾಘವ ವಿಷ್ಣು ಬಾಳೇರಿ, ಮಲಕಣ್ಣ ಡಿ. ಪಾಟೀಲ, ರಾಜಕುಮಾರ ಬಸವರಾಜ ಬಾದವಾಡಗಿ, ನಿರಂಜನ್ ಟಿ.ಎಸ್, ವಾಸು ಹೆಚ್, ರಘುನಾಥ್ ಸಿ., ಮಹಾಮಂಡಳದ ಶಿಕ್ಷಣನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಪಿ.ಎಲ್. ವೆಂಕಟರಾಮರೆಡ್ಡಿ, ಎಮ್.ಎಮ್. ಮೆಟಗುಡ್ಡ, ಶರಣಪ್ಪ ಎಸ್. ವಾರದ, ಆರ್.ಎಸ್.ಸುಬ್ರಹ್ಮಣ್ಯ, ಚಂದ್ರಮೌಳಿ ಎಸ್., ವಿಕ್ರಮ ಆರ್.ಸಿರೂರ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ರವರುಗಳು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡರು ಸ್ವಾಗತಿಸಿದರು. ಸಭೆಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ವಿಷಯವನ್ನು ಮಂಡಿಸಿದರು. ಕೊನೆಯಲ್ಲಿ ಮಹಾಮಂಡಳದ ನಿರ್ದೇಶಕರಾದ ಡಾ. ಎಂ.ಬಿ. ಮಂಜೇಗೌಡ ರವರು ವಂದನಾರ್ಪಣೆ ಸಲ್ಲಿಸಿದರು. ಮಹಾಸಭೆಯಲ್ಲಿ 150ಕ್ಕೂ ಹೆಚ್ಚು ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಎಂ.ಸಿ.ಸಿ. ಬ್ಯಾಂಕಿನ ಕುಲಶೇಖರ ಶಾಖೆಯ ಗ್ರಾಹಕ ಸಂಪರ್ಕ ಸಭೆ




ಎಂಸಿಸಿ ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವದ ಅಂಗವಾಗಿ ಕುಲಶೇಖರ ಶಾಖೆಯ ಗ್ರಾಹಕ ಸಂಪರ್ಕ ಸಭೆಯನ್ನು ಸೆಪ್ಟೆಂಬರ್ 10ರ ಭಾನುವಾರದಂದು, ಮಂಗಳೂರು ಬಜ್ಜೋಡಿಯ ಇನ್ಫೆಂಟ್ ಮೇರಿ ಚರ್ಚಿನ ಸಭಾಂಗಣದಲ್ಲಿ ಸಂಜೆ 6 ಗಂಟೆಗೆ ಆಯೋಜಿಸಲಾಗಿತ್ತು. ಎಂ.ಸಿ.ಸಿ. ಬ್ಯಾಂಕಿನ ಅಧ್ಯಕ್ಷ ಅನಿಲ್ ಲೋಬೊರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಮಂಗಳೂರಿನ ಬಿಕರ್ನಕಟ್ಟೆಯ ಇನ್‌ಫೆಂಟ್ ಜೀಸಸ್ ಶ್ರೈನಿನ ನಿರ್ದೇಶಕರಾದ ವಂದನೀಯ ಫಾ. ರೋವೆಲ್ ಶುಭ್‌ದೀಪ್ ಡಿಸೋಜರವರು ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಸಮಾಜಕ್ಕೆ 110 ವರ್ಷಗಳ ನಿರಂತರ ನಿಸ್ವಾರ್ಥ ಬ್ಯಾಂಕಿಂಗ್ ಸೇವೆಯನ್ನು ನೀಡಿದ ಎಂ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಿಗೆ, ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಅಭಿನಂದಿಸಿದರು. ಬ್ರಿಟಿಷರು ದೇಶವನ್ನು ತೊರೆದಾಗ ಭಾರತವು ಕಷ್ಟಕರ ಸಮಯವನ್ನು ಎದುರಿಸಬೇಕಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿಸಲಾದ ಅನೇಕ ಸಂಸ್ಥೆಗಳಲ್ಲಿ ಕೆಲವು ವಿಲೀನಗೊಂಡವು ಮತ್ತು ಇತರ ಸಂಸ್ಥೆಗಳು ದಿವಾಳಿಯಾದವು. ಆದರೆ ಎಂ.ಸಿ.ಸಿ. ಬ್ಯಾಂಕ್ ಇನ್ನೂ ಎತ್ತರದಲ್ಲಿದೆ. ಮುಂದಿನ ದಿನಗಳಲ್ಲಿ ಬ್ಯಾಂಕ್ ಇನ್ನಷ್ಟು ಯಶಸ್ಸು ಕಾಣಲಿ ಮತ್ತು ಅಗಾಧ ಬೆಳವಣಿಗೆ ಆಗಲಿ ಎಂದು ಶುಭ ಹಾರೈಸಿದರು. ಹಿರಿಯ ನಾಗರಿಕ ಗ್ರಾಹಕರನ್ನೂ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಅಭಿನಂದಿಸಲಾಯಿತು. ಶೈಕ್ಷಣಿಕ ಮತ್ತು ವೃತ್ತಿಪರ ವ್ಯಾಸಂಗದಲ್ಲಿ ವಿಶಿಷ್ಟ ಸಾಧನೆಗೈದ ಗ್ರಾಹಕರ ಮಕ್ಕಳನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ಉಪಾಧ್ಯಕ್ಷರಾದ ಜೆರಾಲ್ಡ್ ಜೂಡ್ ಡಿಸಿಲ್ವಾ, ನಿರ್ದೇಶಕರಾದ ಡೇವಿಡ್ ಡಿಸೋಜ, ಆ್ಯಂಡ್ರ್ಯು ಡಿಸೋಜ, ಹೆರಾಲ್ಡ್ ಡಿಸೋಜ, ಅನಿಲ್ ಪತ್ರಾವೊ, ರೋಶನ್ ಡಿಸೋಜ, ಮಾರ್ಸೆಲ್ ಎಂ. ಡಿಸೋಜ, ವೃತ್ತಿಪರ ನಿರ್ದೇಶಕರಾದ ಸುಶಾಂತ್ ಸಿ. ಎ. ಸಲ್ಡಾನ್ಹಾ, ಆಡಳಿತ ಮಂಡಳಿಯ ಸದಸ್ಯರಾದ ಆಲ್ವಿನ್ ಪಿ. ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಶರ್ಮಿಳಾ ಡಯಸ ಮಿನೇಜಸ್, ಉಪ ಪ್ರಧಾನ ವ್ಯವಸ್ಥಾಪಕ ರಾಜ್ ಮಿನೇಜಸ್, ಹಾಜರಿದ್ದರು. ಮಹಾಪ್ರಬಂಧಕ ಸುನಿಲ್ ಮಿನೇಜಸ್‌ರವರು ಗ್ರಾಹಕರ ಸಭೆಯ ಮಹತ್ವವನ್ನು ವಿವರಿಸಿ ಶಾಖಾ ನಿರ್ದೇಶಕರಾದ ಐರಿನ್ ರೆಬೆಲ್ಲೋರವರು ಸ್ವಾಗತಿಸಿದರು. ಶಾಖೆಯ ವ್ಯವಸ್ಥಾಪಕಿ ವಿಲ್ಮಾ ಜ್ಯೋತಿ ಸಿಕ್ವೇರಾ ಇವರು ವಂದಿಸಿ ಅನಿಲ್ ಡಿಕುನ್ಹಾ ನಿರೂಪಿಸಿದರು.

# ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 46ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ








**ನವದೆಹಲಿ :** ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 46ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ದಿನಾಂಕ : 21.09.2022ರಂದು ನವದೆಹಲಿಯ, ಎನ್‌ಸಿಯುಐ ಸಭಾಂಗಣದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ನ್ಯಾಫಕಬ್ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾರವರು ಹಾಗೂ ನ್ಯಾಫಕಬ್ ಪ್ರೆಸಿಡೆಂಟ್ ಎಮಿರೆಟಸ್ ರವರಾದ ಡಾ॥ ಎಚ್.ಕೆ. ಪಾಟೀಲರು ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಯ ಕುರಿತು ಮಾತನಾಡಿದರು.

ಈ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ನ್ಯಾಫಕಬ್‌ನ ಉಪಾಧ್ಯಕ್ಷರಾದ ಶ್ರೀ ವಿಧ್ಯಾಧರ ವಿ. ಅನಸ್ಕರ್, ನಿರ್ದೇಶಕರುಗಳಾದ ಶ್ರೀ ದಿಲೀಪ ಸಂಘಾನಿ, ಶ್ರೀ ಆರ್.ಬಿ. ಶಾಂಡಿಲ್ಯ, ಶ್ರೀ ಎ.ಎಂ. ಹಿಂಡಸಗೇರಿ, ಶ್ರೀ ಮುದಿತ್ ವರ್ಮಾ, ಶ್ರೀ ಕೆ. ಜಯವರ್ಮಾ, ಶ್ರೀ ಲಕ್ಷ್ಮೀದಾಸ್, ಶ್ರೀ ವೇಮಿರೆಡ್ಡಿ ನರಸಿಂಹ ರೆಡ್ಡಿ, ಶ್ರೀ ಎಸ್.ಎನ್. ಬೆಂಡೆ, ಶ್ರೀ ಡಿ.ಎ. ಚಳಕೆ, ಶ್ರೀ ಜಿ.ಯು. ವ್ಯಾಸ್, ಶ್ರೀ ಕೆ. ಕಾಳಪ್ಪ, ಶ್ರೀ ಜಿ.ಸಿ. ಆಚಾರಜಿ, ಶ್ರೀಮತಿ ಅಲಕಾ ಶ್ರೀವಾಸ್ತವ, ಶ್ರೀ ಕೆ.ಎಲ್. ಪಟೇಲ್, ಡಾ॥ ಯು.ವಿ. ಜೋಶಿ, ಶ್ರೀ ಎನ್.ವಿ. ಪಟೇಲ್, ಶ್ರೀ ಓ.ಪಿ. ಶರ್ಮಾ, ಶ್ರೀ ಜಿ.ಇ. ಠಾಕೂರ್, ಪ್ರೋ। ಜ್ಯೋತಿರ್‌ಮಯ ಕರ್, ಶ್ರೀ ಎಸ್.ಎಸ್. ಸಿಸೋಡಿಯ, ಶ್ರೀ ರಮೇಶ ಮಂತ್ರಿ, ಶ್ರೀ ಎನ್.ಎಸ್. ಜಯಕುಮಾರ್, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಯೋಗೇಶ್ ಶರ್ಮಾ ಉಪಸ್ಥಿತರಿದ್ದರು. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು.

## ನ್ಯಾಫಕಬ್ ನಿಂದ 100 ವರ್ಷ ಪೂರೈಸಿದ ಬ್ಯಾಂಕಿಗೆ ಸನ್ಮಾನ

ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., (ನ್ಯಾಫಕಬ್) ನವದೆಹಲಿ ತಾ: 21–09–2022, ಬುಧವಾರ ನಡೆದ ವಾರ್ಷಿಕ ಸರ್ವಸಾಧಾರಣ ಮಹಾಸಭೆಯಲ್ಲಿ ಹೊನ್ನಾವರ ಅರ್ಬನ ಬ್ಯಾಂಕು 100 ವರ್ಷ ಪೂರೈಸಿದ ಹಾಗೂ ವಿಶೇಷ ಸಾಧನೆಗಳನ್ನು ಗುರುತಿಸಿ ಹೊನ್ನಾವರ ಅರ್ಬನ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಘವ ವಿಷ್ಣು ಬಾಳೇರಿಯವರನ್ನು ರಾಷ್ಟ್ರೀಯ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹತಾ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರೂ ಹಾಗೂ ನ್ಯಾಫ್‌ಕಬ್‌ನ ಪ್ರೆಸಿಡೆಂಟ್ ಎಮಿರೆಟಸ್‌ರವರಾದ ಶ್ರೀ ಎಚ್.ಕೆ. ಪಾಟೀಲರವರು ಶಾಲು ಹೊದಿಸಿ ಸ್ಮರಣಿಕೆಯನ್ನು ನೀಡಿ ಸನ್ಮಾನಿಸಿದರು.



## ವೀರಶೈವ ಸಹಕಾರಿ ಬ್ಯಾಂಕ : 47ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ



**ಬೆಂಗಳೂರು :** ವೀರಶೈವ ಸಹಕಾರಿ ಬ್ಯಾಂಕಿನ 47ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ : 18.09.2022ರಂದು ವರ್ಚುಯಲ್ ಮೀಟಿಂಗ್ ಮೂಲಕ ನಡೆಸಿದ್ದು, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು. ಬ್ಯಾಂಕಿನ ಅಧ್ಯಕ್ಷರು ಸ್ವಾಗತ ಭಾಷಣ ಹಾಗೂ ಪ್ರಾಸ್ತಾವಿಕ ನುಡಿಯಲ್ಲಿ ಬ್ಯಾಂಕಿನ ಪ್ರಗತಿ, ಆರ್ಥಿಕ ಅಂಶಗಳು ಮುಂದಿನ ವರ್ಷದಲ್ಲಿ ಕೈಗೊಳ್ಳುವ ಯೋಜನೆ, ಪ್ರಸಕ್ತ ಸಾಲಿನ ಲಾಭ ಗಳಿಕೆ ಕುರಿತು ಸವಿಸ್ತಾರವಾಗಿ ವಿವರಣೆಯನ್ನು ನೀಡಿ, 2021–22ನೇ ಸಾಲಿಗೆ ಶೇ.12ರಂತೆ ಲಾಭಾಂಶ ವಿತರಿಸುವುದಾಗಿ ಪ್ರಕಟಿಸಿದರು.

ಬ್ಯಾಂಕಿನ ಸದಸ್ಯರ / ಗ್ರಾಹಕರ ಅನುಕೂಲಕ್ಕಾಗಿ ಆಡಳಿತ ಮಂಡಲಿಯು ಅತಿ ಕಡಿಮೆ ಬಡ್ಡಿದರದಲ್ಲಿ ಗೃಹ ನಿರ್ಮಾಣ / ಗೃಹ ಖರೀದಿ / ನಿವೇಶನ ಖರೀದಿ ಸಾಲಗಳಿಗೆ ಆರ್‌ಬಿಐ ನಿರ್ದೇಶನದಂತೆ ರೂ.70ಲಕ್ಷಗಳಿಂದ ರೂ.140.00ಲಕ್ಷಗಳವರೆಗೆ (ಶೇ.7.50ರಂತೆ) ಪರಿಷ್ಕರಿಸಲಾಗಿರುವುದನ್ನು ಹಾಗೆಯೇ ವಿವಿಧ ರೀತಿಯ ಸಾಲಗಳಾದ ವಿದ್ಯಾಭ್ಯಾಸ ಸಾಲ, ವಾಹನಾಧಾರ ಸಾಲ, ಸಣ್ಣ ಕೈಗಾರಿಕಾ ಘಟಕ ಸಾಲ (MSME) ಗಳನ್ನು ನೀಡುತ್ತಿರುವುದರಾಗಿ ಸಭೆಯಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ದಿ ಅಕ್ಕಿ–ಆಲೂರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ : 61ನೇ ವಾರ್ಷಿಕ ಮಹಾಸಭೆ



**ಅಕ್ಕಿ–ಆಲೂರ :** ದಿನಾಂಕ : 17.09.2022ರಂದು ಅಕ್ಕಿ–ಆಲೂರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆಯು ಅಕ್ಕಿ–ಆಲೂರನ ಶ್ರೀ ಕುಮಾರೇಶ್ವರ ಕಲ್ಯಾಣಮಂಟಪದಲ್ಲಿ ಜರುಗಿತು. ಮಹಾಸಭೆಯನ್ನು ಹಾನಗಲ್ ಶಾಸಕರಾದ ಶ್ರೀ ಶ್ರೀನಿವಾಸ ಮಾನೆ ಯವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಹಾವೇರಿ ಮಾಜಿ ಶಾಸಕರಾದ ಶ್ರೀ ಶಿವರಾಜ ಸಜ್ಜನ ಭಾಗವಹಿಸಿದ್ದರು. ಉದ್ಘಾಟಕರಾದ ಶಾಸಕ ಶ್ರೀ ಶ್ರೀನಿವಾಸ ಮಾನೆ ರವರು ಮಾತನಾಡುತ್ತಾ ಬ್ಯಾಂಕು ಸಂಪೂರ್ಣ ವೃತ್ತಿಪರತೆಯಿಂದ ಕೂಡಿರಲಿ ಹಾಗೂ ಎಲ್ಲ ವ್ಯವಹಾರವೂ ಡಿಜಿಟಲೀಕರಣ ಹೊಂದಲಿ ಎಂದು ಸಲಹೆ ಕೊಟ್ಟು ಆಡಳಿತ ಮಂಡಳಿಯ ಅವಿರತ ಪ್ರಾಮಾಣಿಕ ಸೇವೆಯಿಂದ ಬ್ಯಾಂಕು ರೂ.21.27ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿ ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀ ಶಿವರಾಜ ಸಜ್ಜನ ಇವರು ಮಾತನಾಡಿದರು. ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬ್ಯಾಂಕಿನ ಚೇರಮನರಾದ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ ಇವರು ಮಾತನಾಡುತ್ತ ಬ್ಯಾಂಕಿನ ಸಕಲ ಏಳಿಗೆಗೆ ಸದಸ್ಯರ ಸಹಕಾರ, ಆಡಳಿತ ಮಂಡಳಿಯ ದಿಟ್ಟ ತೀರ್ಮಾನ ಮತ್ತು ಸಿಬ್ಬಂದಿಯ ವೃತ್ತಿಪರತೆಯ ಅನುಭವದಿಂದ ಬ್ಯಾಂಕು ಸಾಕಷ್ಟು ಪ್ರಗತಿ ಸಾಧಿಸಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರು, ಸದಸ್ಯರು, ಗ್ರಾಹಕರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಿದ್ದಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 29ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



ತುಮಕೂರಿನ ಸಿದ್ಧಗಂಗಾ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಇದರ 29ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 18/09/2022 ರ ಭಾನುವಾರದಂದು ಎಸ್.ಐ.ಟಿ. ಬಿರ್ಲಾ ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. 2021-22ನೇ ಸಾಲಿಗೆ ಬ್ಯಾಂಕು ರೂ. 6,57,92,653.00 ಒಟ್ಟು ಲಾಭ ಗಳಿಸಿದ್ದು, ವರದಿ ಸಾಲಿನ ನಿವ್ವಳ ಲಾಭ ಅವಕಾಶಗಳ ನಂತರ ರೂ. 1,83,70,471.31 ಇದ್ದು, 12% ಡಿವಿಡೆಂಡ್ ಅನ್ನು ಘೋಷಿಸಲಾಗಿದೆ.

ಈ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರು, ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಶಂಕರಯ್ಯನವರು, ನಿರ್ದೇಶಕರುಗಳಾದ ಬಿ.ಎಸ್. ರುದ್ರೇಶಯ್ಯನವರು, ಮಹೇಶಪ್ಪನವರು, ಡಾ॥ ಆರ್.ಸಿ. ಪುಟ್ಟಬುದ್ಧಿರವರು, ಡಾ॥ ಪರಮೇಶ್‌ರವರು, ಟಿ.ಎಂ. ಸ್ವಾಮಿರವರು, ಎಸ್. ವಿಶ್ವನಾಥಯ್ಯನವರು, ಆರ್. ಚಿಕ್ಕಯ್ಯನವರು, ಎಸ್. ವಿಶ್ವನಾಥ್‌ರವರು, ಕೆ.ಎಂ. ಸ್ವಾಮಿರವರು, ರಾಮಯ್ಯನವರು, ಶ್ರೀಮತಿ ಮಂಜುಳಪ್ರಸಾದ್‌ರವರು, ಶ್ರೀಮತಿ ಡಾ॥ ರೇಣುಕ ಲತರವರು, ಶ್ರೀ ಕೆ.ಸಿ. ಶಿವಗಂಗಯ್ಯರವರು, ಎಲ್. ಬಸವರಾಜುರವರು, ಸಿ.ಆರ್. ರಮೇಶ್‌ರವರು ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ. ಹೆಚ್.ಕೆ. ಶಿವಪ್ರಕಾಶ್‌ರವರು ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು ಹಾಗೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡಾ 90ಕ್ಕಿಂತ ಹೆಚ್ಚಿನ ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

## ಹೊನ್ನಾವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 103ನೇ ವಾರ್ಷಿಕ ಸರ್ವಸಾಧಾರಣ ಸಭೆ




ದಿನಾಂಕ : 18-09-2022 ರಂದು ಹೊನ್ನಾವರ ನಗರ ಸಹಕಾರಿ ಬ್ಯಾಂಕಿನ 103ನೇ ವಾರ್ಷಿಕ ಸರ್ವಸಾಧಾರಣ ಸಭೆಯು ನ್ಯೂ ಇಂಗ್ಲೀಷ ಸ್ಕೂಲ್, ಹೊನ್ನಾವರ ಆವರಣದಲ್ಲಿ ಜರುಗಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಘವ ವಿಷ್ಣು ಬಾಳೇರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

1919ರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿರುವ ಪ್ರತಿಷ್ಠಿತ ದಿ ಹೊನ್ನಾವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಹೊನ್ನಾವರ 2021-22ನೇ ಸಾಲಿನಲ್ಲಿ ರೂ. 2 ಕೋಟಿ 29 ಲಕ್ಷ ನಿರ್ವಹಣಾ ಲಾಭ ಗಳಿಸಿದ್ದು, ಸರಕಾರಕ್ಕೆ ಆದಾಯ ತೆರಿಗೆ ಪಾವತಿಸುವ ಬಗ್ಗೆ ಅನುವು ಮಾಡಿದ ನಂತರ ರೂ. 1 ಕೋಟಿ 52 ಲಕ್ಷ ನಿಕ್ಕಿ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಶ್ರೀ ರಾಘವ ವಿಷ್ಣು ಬಾಳೇರಿಯವರು ವಾರ್ಷಿಕ ಸರ್ವಸದಸ್ಯರ ಸಾಧಾರಣ ಸಭೆಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರು, ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಬ್ಯಾಂಕಿನ ಸದಸ್ಯರು, ಗ್ರಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಭಾಲ್ಕಿ ಪಟ್ಟಣ ಸಹಕಾರ ಬ್ಯಾಂಕ್ : 40ನೇ ವಾರ್ಷಿಕ ಮಹಾಸಭೆ



**ಭಾಲ್ಕಿ :** ಭಾಲ್ಕಿ ಪಟ್ಟಣ ಸಹಕಾರ ಬ್ಯಾಂಕಿನ 40ನೇ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಲಾಸ ಬಕ್ಕಾ ರವರು ಉದ್ಘಾಟಿಸಿ, ಮಾತನಾಡಿ ಉತ್ತಮ ಗ್ರಾಹಕರಿಂದಲೇ ಬ್ಯಾಂಕಿನ ಆರ್ಥಿಕ ಪ್ರಗತಿ ಸಾಧ್ಯ, ಸಾಲ ಪಡೆದವರು ತಮ್ಮ ಮಾಸಿಕ ಕಂತುಗಳನ್ನು ಸಕಾಲಕ್ಕೆ ತುಂಬುವ ಮೂಲಕ ಬ್ಯಾಂಕಿನ ಸರ್ವಾಂಗೀಣ ವಿಕಾಸಕ್ಕೆ ಪ್ರೇರಣೆಯಾಗಬೇಕು ಎಂದರು.

ಮಹಾಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಸೂರ್ಯಮತಿ ಮಡ್ಡೆ, ಆಡಳಿತ ಮಂಡಳಿ ನಿರ್ದೇಶಕರುಗಳಾದ ಜೀವನ ಪೆದ್ದೆ, ಚಂದ್ರಶೇಖರ ವಂಕೆ, ಅನಿಲ ಲೋಖಂಡೆ, ದಿಲಿಪಕುಮಾರ ಸುಂಟೆ, ನಿರಂಜನ ಅಷ್ಟೂರೆ, ಜಗನ್ನಾಥ ಬಿರಾದಾರ, ಮನಿಶಾ ವಾಲೆ, ಎಂ.ಡಿ. ಹುಸೇನ್ ಇನಾಮದಾರ, ರಾಹುಲ ಸಾವಳ, ಸಂಜೀವ ಕುಮಾರ್ ಗುಂಜರಗೆ, ಬಸವರಾಜ ಬೋರಡೆ, ನಿತಿನ್ ಸ್ವಾಮಿ, ಕಾವೇರಿ ಕಲ್ಯಾಣಿ ಸ್ವಾಗತಿಸಿದರು. ಪ್ರಶಾಂತ ಖಂಡ್ರೆ ನಿರೂಪಿಸಿದರು. ವ್ಯವಸ್ಥಾಪಕ ವಿಜಯಕುಮಾರ ಬಿರಾದಾರ ವಂದಿಸಿದರು.

## ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕ್ : 25ನೇ ವಾರ್ಷಿಕ ಮಹಾಸಭೆ



**ಹಾವೇರಿ** : ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕಿನ 25ನೇ ವಾರ್ಷಿಕ ಮಹಾಸಭೆಯು ದಿನಾಂಕ : 10–09–2022 ರಂದು ಹಾವೇರಿಯ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ. ದಾಕ್ಷಾಯಣಿ ಗಾಣಿಗೇರ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಆಡಳಿತ ಮಂಡಳಿ ನಿರ್ದೇಶಕರು ಮಹಾಸಭೆಯನ್ನು ಜ್ಯೋತಿ ಬೆಳಗಿಸುವದರ ಮೂಲಕ ಉದ್ಘಾಟಿಸಿದರು. ಸಭಾಧ್ಯಕ್ಷರು ಮಾತನಾಡಿ, 2021–22ನೇ ಸಾಲಿನಲ್ಲಿ ಬ್ಯಾಂಕು ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿದೆ. ದಿನಾಂಕ : 31–03–2022ಕ್ಕೆ ಇದ್ದಂತೆ ರೂ. 16.24 ಕೋಟಿ ಠೇವಣಿ ಸಂಗ್ರಹವಾಗಿ ರೂ. 10.20 ಕೋಟಿ ಸಾಲ ನೀಡಿದೆ, ದುಡಿಯುವ ಬಂಡವಾಳ ರೂ.20 ಕೋಟಿ ವರೆಗೆ ದಾಖಲಾಗಿದೆ ಎಂದರು.

ಬ್ಯಾಂಕು ಕಳೆದ 25 ವರ್ಷಗಳ ಪಯಣದಲ್ಲಿ ಪ್ರಗತಿಯನ್ನು ಸಾಧಿಸಿರುವದು ಪ್ರಶಂಸಗೆ ಪಾತ್ರವಾಗಿದೆ ಎಂದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ. ವಿಮಲ್ ಹಿಂಚಿಗೇರಿ ಅವರು ಸೇರಿದಂತೆ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ವೃತ್ತಿನಿರತ ನಿರ್ದೇಶಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು, ವ್ಯವಸ್ಥಾಪಕರಾದ ಶ್ರೀ. ಎನ್.ಜಿ. ರಟ್ಟೀಹಳ್ಳಿ ರವರು ವಾರ್ಷಿಕ ವರದಿ ವಾಚನ ಮಾಡಿದರು.



75ನೇ ಅಮೃತ ಮಹೋತ್ಸವ ಸ್ವಾತಂತ್ರ ದಿನಾಚರಣೆ ಶುಭ ಸಂಧರ್ಭದಲ್ಲಿ ಸವಿನೆನಪಿಗಾಗಿ ಮಾಜಿ ಸೈನಿಕರನ್ನು ಸನ್ಮಾನಿಸಿ ಗೌರವಿಸಲಾಯಿತು, ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕರಿಸಲಾಯಿತು, ಬ್ಯಾಂಕಿನ ನಿರ್ದೇಶಕರನ್ನು ಹಾಗೂ ಉತ್ತಮ ಸದಸ್ಯರನ್ನು ಸತ್ಕರಿಸಲಾಯಿತು. ಈ ಮಹಾಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






**▸▸ ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಒಂದು ರೋಟರಿ ಸಂಸ್ಥೆ ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯಲು ಇಚ್ಛಿಸಿದ್ದು, ಸದರಿ ಖಾತೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳ ಕುರಿತು ಸಲಹೆ ನೀಡಬೇಕಾಗಿ ವಿನಂತಿ.**

(ಅ) ಸದರಿ ಸಂಘ ಸಂಸ್ಥೆ ಹೆಸರಿನಲ್ಲಿ ರಿಜರ್ವ್ ಬ್ಯಾಂಕ್ ನಿರ್ದೇಶನಗಳನ್ವಯ ಬ್ಯಾಂಕು ಉಳಿತಾಯ ಖಾತೆ ತೆರೆಯಬಹುದೇ?

(ಆ) ಒಂದು ವೇಳೆ ಉಳಿತಾಯ ಖಾತೆ ತೆರೆದರೇ ಆ ಖಾತೆಗೆ ತ್ರೈಮಾಸಿಕವಾಗಿ ನಾವು ಬಡ್ಡಿ ಕೊಡಬಹುದೇ?

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ :** (ಅ) ಭಾರತೀಯ ರಿಜರ್ವ್ ಬ್ಯಾಂಕಿನ ಠೇವಣಿ ಮೇಲಿನ ಬಡ್ಡಿದರ ಸಂಬಂಧಿತ ದಿನಾಂಕ ಮೇ 12, 2016 (ಸೆಪ್ಟೆಂಬರ್ 16, 2022ರಂದು ನವೀಕರಿಸಲಾದ)ರ ಮಾಸ್ಟರ್ ಡೈರೆಕ್ಷನ್‌ನ ಕಲಂ 27ರಲ್ಲಿ ನಿಷೇಧಿಸಲಾದ ಸಂಘ ಸಂಸ್ಥೆಗಳನ್ನು ಹೊರತುಪಡಿಸಿ ಇತರೆ ವ್ಯಕ್ತಿ ಮತ್ತು ಸಂಸ್ಥೆಗಳ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಬಹುದು. ರೋಟರಿ ಸಂಸ್ಥೆ ಕರ್ನಾಟಕ ಸೊಸೈಟಿಗಳ ಕಾಯ್ದೆಯಡಿ ನೋಂದಾಯಿಸಲ್ಪಟ್ಟು ವಾಣಿಜ್ಯ ಘಟಕವಲ್ಲದ ಕಾರಣ ಉಳಿತಾಯ ಖಾತೆಯನ್ನು ಅದರ ಹೆಸರಿನಲ್ಲಿ ತೆರೆಯಬಹುದು. ಮೇಲೆ ನಮೂದಿಸಿದ ಮಾಸ್ಟರ್ ಡೈರೆಕ್ಷನ್‌ನ ಷೆಡ್ಯೂಲ್ಡ್ 1ರಲ್ಲಿ ಉಳಿತಾಯ ಖಾತೆ ತೆರೆಯಲು ಇರುವ ನಿಷೇಧದಿಂದ ವಿನಾಯಿತಿ ಪಡೆದ ಸಂಸ್ಥೆಗಳ ಪಟ್ಟಿಯನ್ನು ನೀಡಲಾಗಿದೆ. ರೋಟರಿ ಸಂಸ್ಥೆಯು ಷೆಡ್ಯೂಲ್ 1ರ ಕ್ರಮಸಂಖ್ಯೆ 4ರಲ್ಲಿ ಸೂಚಿಸಿದ ವಿನಾಯಿತಿಯಲ್ಲಿ ಬರುತ್ತದೆ.

(ಆ) ಬೇರೆ ಉಳಿತಾಯ ಖಾತೆಗೆ ನೀಡುವ ಬಡ್ಡಿಯನ್ನು ರೋಟರಿ ಸಂಸ್ಥೆಯ ಹೆಸರಿನಲ್ಲಿರುವ ಉಳಿತಾಯ ಖಾತೆಗೂ ನೀಡಬಹುದಾಗಿದೆ.

**02. ನಮ್ಮ ಬ್ಯಾಂಕಿನಲ್ಲಿ ಅನೇಕ ಕ್ರೆಡಿಟ್ ಸಹಕಾರ ಸಂಘಗಳ ಉಳಿತಾಯ ಖಾತೆಗಳಿವೆ. ರಿಸರ್ವ್ ಬ್ಯಾಂಕು ದಿನಾಂಕ ಸೆಪ್ಟೆಂಬರ್ 16, 2022ರಂದು ಠೇವಣಿ ಮೇಲಿನ ಬಡ್ಡಿದರ ಸಂಬಂಧಿತ ಮಾಸ್ಟರ್ ಡೈರೆಕ್ಷನ್‌ನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ತೆರೆಯಬಹುದಾದ ಉಳಿತಾಯ ಖಾತೆಗಳ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ನಮ್ಮ ಅಭಿಪ್ರಾಯದಂತೆ ಕ್ರೆಡಿಟ್ ಸಹಕಾರ ಸಂಘಗಳು ಮಾಸ್ಟರ್ ಡೈರೆಕ್ಷನ್‌ನ ಷೆಡ್ಯೂಲ್ 1ರಲ್ಲಿ ನೀಡಲಾದ ನಿಷೇಧದಿಂದ ವಿನಾಯಿತಿ ಪಡೆದ ಸಂಸ್ಥೆಗಳ ಪಟ್ಟಿಯಲ್ಲಿ ಬರುತ್ತಿದ್ದು, ಕ್ರೆಡಿಟ್ ಸಹಕಾರ ಸಂಘಗಳ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ಯಾವುದೇ ನಿರ್ಬಂಧವಿಲ್ಲ. ಈ ಬಗ್ಗೆ ಸ್ಪಷ್ಟೀಕರಣ ನೀಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

ಉತ್ತರ: ಕ್ರೆಡಿಟ್ ಸಹಕಾರ ಸಂಘವು ಒಂದು ವ್ಯಾಪಾರ ಸಂಸ್ಥೆಯಾಗಿದ್ದು, ನೀವು ಉಲ್ಲೇಖಿಸಿದ ರಿಜರ್ವ್ ಬ್ಯಾಂಕಿನ ಮಾಸ್ಟರ್ ಡೈರೆಕ್ಷನ ಕಲಂ 27ರ ಪ್ರಕಾರ ವ್ಯಾಪಾರ ಸಂಸ್ಥೆಯ ಹೆಸರಿನಲ್ಲಿ ಉಳಿತಾಯ ಖಾತೆ ತೆರೆಯುವಂತಿಲ್ಲ. ಮಾಸ್ಟರ್ ಡೈರೆಕ್ಷನ್‌ನ ಷೆಡ್ಯೂಲ್ 1ರ ಕ್ರಮ ಸಂಖ್ಯೆ 4ರಲ್ಲಿ ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ 1960ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸೊಸೈಟಿಗಳ ಹೆಸರಿನಲ್ಲಿ ಉಳಿತಾಯ ಖಾತೆ ತೆರೆಯಬಹುದು. ಆದರೆ, ಕ್ರೆಡಿಟ್ ಸಹಕಾರ ಸಂಸ್ಥೆಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದ್ದು, ಈ ವಿನಾಯಿತಿಗೆ ಅರ್ಹರಲ್ಲ. ಹಾಗಾಗಿ, ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಗಳ ಹೆಸರಿನಲ್ಲಿ ಉಳಿತಾಯ ಖಾತೆ ತೆರೆಯುವಂತಿಲ್ಲ.



# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಒಡಿಸ್ಸಾದ ನಯಾಗರ್ ಜಿಲ್ಲೆಯ ಕೊಡಲಪಲ್ಲಿ ಮತ್ತು ಸಿಂದೂರಿಯಾ ಗ್ರಾಮಗಳ ಜನರು, ಕಾಡು ನಮ್ಮ ಬದುಕಿಗೆ ರಕ್ಷಣೆಯಾಗಿ ನಮ್ಮನ್ನು ಕಾಯುತ್ತಿದೆ, ಸಲಹುತ್ತಿದೆ ಆದ್ದರಿಂದಲೇ ನಾವು ಕಾಡು ಕಾಯುತ್ತೇವೆ ಎನ್ನುತ್ತಾರೆ.
- ಖ್ಯಾತ ರಾಗ ಸಂಯೋಜಕ, ಗಾಯಕ ದಿ.ಮೈಸೂರು ಅನಂತಸ್ವಾಮಿ ಸಂಯೋಜಿಸಿದ್ದ ಧಾಟಿಯಲ್ಲೇ ಕುವೆಂಪು ವಿರಚಿತ ನಾಡಗೀತೆಯನ್ನು ಹಾಡುವುದಕ್ಕೆ ಈಗ ರಾಜ್ಯ ಸರ್ಕಾರ ಸಮ್ಮತಿ ಸೂಚಿಸಿದೆ.
- ಕೇರಳದ ತಿರುವನಂತಪುರಂ ಜಿಲ್ಲೆಯ ಪುಲ್ಲಂಪಾರಾ ದೇಶದ ಮೊದಲ ಸಂಪೂರ್ಣ ಡಿಜಿಟಲ್ ಸಾಕ್ಷರತೆ ಸಾಧಿಸಿದ ಮೊದಲ ಗ್ರಾಮ ಪಂಚಾಯಿತಿಯಾಗಿದೆ.
- ತಿರುವನಂತಪುರದ ಆಟೋ ಚಾಲಕ ಅನೂಪ್, ತನ್ನ ಜೀವನೋಪಾಯಕ್ಕಾಗಿ ಮಲೇಷ್ಯಾಗೆ ಹೋಗಲು 3 ಲಕ್ಷ ರೂಪಾಯಿ ಸಾಲ ಮಾಡಿದ ಮರು ದಿನವೇ, ತಾನು 25 ಕೋಟಿ ರೂಪಾಯಿ ಮೌಲ್ಯದ ಓಣಂ ಬಂಪರ್ ಲಾಟರಿ ಗೆದ್ದಿರುವ ಮಾಹಿತಿ ಗೊತ್ತಾಗಿದೆ.
- ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಸೆಕ್ಯುರಿಟಿ ಡಾಗ್ ಆಗಿ ಕಾರ್ಯನಿರ್ವಹಿಸುತ್ತಿರುವ ಬೆಲ್ಜಿಯಂ ಶೆಫರ್ಡ್ ಮಾಯಾ ಎಂಬ ನಾಯಿ ತೀವ್ರ ಅಸ್ವಸ್ಥಗೊಂಡಾಗ, ಅದರ ಜೀವ ಉಳಿಸಲು ಜರ್ಮನ್ ಶೆಫರ್ಡ್ ಚಾರ್ಲಿ ಎಂಬ ನಾಯಿ ಮಾಡಿದ ರಕ್ತದಾನದಿಂದ ಚೇತರಿಸಿಕೊಂಡಿದೆ.
- ಯಾದಗಿರಿಯ ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲೇ ಓದಿದ ಮಕ್ಕಳ ತಜ್ಞ ಡಾ. ಎಂ. ಶ್ರೀನಿವಾಸ್ ಅವರನ್ನು ಕೇಂದ್ರ ಸರ್ಕಾರ ದೇಶದ ಪ್ರತಿಷ್ಠಿತ ದೆಹಲಿಯ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (ಏಮ್ಸ್)ನ ನೂತನ ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ.
- ಮಂಗಳೂರಿನ ಅನಕ್ಷರಸ್ಥ ಚಿಂದಿ ವ್ಯಾಪಾರಿ 50 ವರ್ಷದ ಇಸ್ಮಾಯಿಲ್ ಕಣತ್ತೂರ್ ಅವರು ಕಳೆದ 15 ವರ್ಷಗಳಲ್ಲಿ ಕಸದ ರಾಶಿಯ ಜೊತೆಗೆ ಸಿಕ್ಕ ಪುಸ್ತಕಗಳನ್ನು ಜತನದಿಂದ ಎತ್ತಿಟ್ಟಿದ್ದು, ಸಧ್ಯ ಅವರ ಗ್ರಂಥಾಲಯದಲ್ಲಿ ಕನಿಷ್ಠ 2,000 ಪುಸ್ತಕಗಳಿವೆ.
- ಬೆಂಗಳೂರಿನ ಆಕರ್ಷಣೆಗಳಲ್ಲಿ ಒಂದಾಗಿರುವ ಕಬ್ಬನ್ ಉದ್ಯಾನದಲ್ಲಿ ಶೀಘ್ರದಲ್ಲೇ ಸುರಂಗ ಅಕ್ವೇರಿಯಂ ತಲೆ ಎತ್ತಲಿದ್ದು, ಈ ಅಕ್ವೇರಿಯಂನಲ್ಲಿ 30ಕ್ಕೂ ಹೆಚ್ಚು ಬಗೆಯ ಅಲಂಕಾರಿಕ ಆಕ್ವಾ ಪ್ರಾಣಿಗಳು ಇರುತ್ತವೆ ಎಂದು ಹೇಳಲಾಗಿದೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

**ಅಗತ್ಯ ನಿಯಮಗಳನ್ನು ರೂಪಿಸಲಿ :** ನಮ್ಮ ದೇಶ ಭಾಷಾ ವೈವಿಧ್ಯಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ ಬ್ಯಾಂಕ್ ಸಿಬ್ಬಂದಿಗಳಿಗೆ ಸ್ಥಳೀಯ ಭಾಷೆ ಗೊತ್ತಿರಬೇಕಾದದ್ದು ಅತಿ ಅಗತ್ಯ. ಇದಕ್ಕಾಗಿ ಬ್ಯಾಂಕ್ ನೇಮಕಾತಿಗಳಲ್ಲಿ ಸ್ಥಳೀಯ ಭಾಷೆ ಮಾತನಾಡ ಬಲ್ಲವರನ್ನೆ ಆಯ್ಕೆ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಭಾಷಾ ಜಗಳಕ್ಕೆ ಆಸ್ಪದವಾಗುತ್ತದೆ. ಇನ್ನು ಮುಂದಾದರೂ ಈ ಕುರಿತಂತೆ ಅಗತ್ಯ ನಿಯಮಗಳನ್ನು ರೂಪಿಸಲಿ.

**▸▸ ರುದ್ರಗೌಡ ಪಾಟೀಲ, ಧಾರವಾಡ**

**ಜನರನ್ನು ಕಾಪಾಡುವವರಾರು? :** ಇತ್ತೀಚಿನ ದಿಗಳಲ್ಲಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಾಗಿವೆ. ಚಿಲ್ಲರೆ ಹಣದುಬ್ಬರ ದರವು ಏರಿಕೆಯಾಗುತ್ತಲೇ ಇದೆ. ಹಣದುಬ್ಬರಕ್ಕೆ ಕಡಿವಾಣ ಹಾಕಲು, ಕೇಂದ್ರ ಸರ್ಕಾರವಾಗಲಿ, ರಿಸರ್ವ್ ಬ್ಯಾಂಕಾಗಲಿ ಯಾವುದೇ ಗಂಭೀರ ಪ್ರಯತ್ನ ಮಾಡುತ್ತಿಲ್ಲ. ಈಗ ರಿಸರ್ವ್ ಬ್ಯಾಂಕ್ ಮತ್ತೆ ರೆಪೊ ದರವನ್ನು ಹೆಚ್ಚಿಸುವ ಸಾಧ್ಯತೆ ಕಂಡುಬರುತ್ತಿದೆ. ಹೀಗಾದಲ್ಲಿ ಜನರನ್ನು ಕಾಪಾಡುವವರಾರು?

**▸▸ ರೇಣುಕಾ ಜಯದೇವಪ್ಪ, ತುಮಕೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.